

ಲಭ್ಯ. ಆಯ್ಕೆ ನಿಮಗೆ ಬಿಟ್ಟಿದ್ದು. ಪ್ರತಿ ಗಿಡಕ್ಕೆ ನೀಡಬೇಕಾದ ಪ್ರಮಾಣವನ್ನು ಲೇಬಲ್ ಮೇಲೆ ನಮೂದಿಸಿರಲಾಗುತ್ತದೆ. ಗೊಬ್ಬರ ನೀಡುವ ಮೊದಲು ಗಿಡಗಳಿಗೆ ನೀರುಣಿಸುವುದನ್ನು ಮರೆಯಬೇಡಿ. ಅತಿಯಾದ ಸಾಂದ್ರತೆ ಹೆಚ್ಚಿರುವ ಗೊಬ್ಬರ ಎಲೆಗಳನ್ನು ಸುಡಬಹುದು.

ಪೋಷಕಾಂಶಗಳ ದೃಷ್ಟಿಯಿಂದ ಒಳಾಂಗಣ ಸಸ್ಯಗಳಿಗೆ ಬಳಸುವ ಮಣ್ಣಿನ ಮಿಶ್ರಣ ಸಲ್ಪ ಭಿನ್ನವಾದದ್ದು. ಮಣ್ಣಿನ ಜೊತೆ ಕ್ರಿಮಿರಹಿತ ಕೊಟ್ಟಿಗೆ ಗೊಬ್ಬರ, ಎರೆಗೊಬ್ಬರ, ಕೊಕೋಪೀಟ್, ಪರ್ಲೈಟ್‌ನಂತಹ ಹಗುರವಾದ ಬೇರೆ ಆಧಾರಗಳನ್ನು ಸೇರಿಸಬೇಕು. ಎರಡು ಭಾಗ ಮಣ್ಣು, ಒಂದು ಭಾಗ ಮರಳು, ಒಂದು ಭಾಗ ಕಳಿತ ಕೊಟ್ಟಿಗೆ/ಎರೆಹುಳು ಗೊಬ್ಬರ ಅತ್ಯಂತ ಒಳ್ಳೆಯ, ಸುಲಭವಾಗಿ ತಯಾರಿಸಲಾಗುವ ಕುಂಡದ ಮಿಶ್ರಣ. ಮರಳು ನೀರು ಬಸಿಯುವಿಕೆಗೆ ಸಹಾಯ ಮಾಡಿದರೆ ಗೊಬ್ಬರ ಪೋಷಕಾಂಶಗಳ ಪೂರೈಕೆಗೆ ಒಳ್ಳೆಯದು, ಕೋಕೋಪೀಟ್ ಪರ್ಲೈಟ್ ಹೆಚ್ಚು ದಿನಗಳವರೆಗೆ ನೀರನ್ನು ಹಿಡಿದಿಡುವ ಸಾಮರ್ಥ್ಯ ಹೊಂದಿದೆ. ಮರಳಿನ ಕಡಿಯನ್ನು ಹೆಚ್ಚಿಸಿ ಈ ಮಿಶ್ರಣವನ್ನು ಸಕ್ಯುಲೆಂಟ್ಸ್‌ಗೂ ಬಳಸಬಹುದು. ಇದಕ್ಕಿಂತಲೂ ಸಕ್ಯುಲೆಂಟ್ಸ್‌ಗೆಂದೇ ಲಭ್ಯವಿರುವ ಮಿಶ್ರಣ ಬಳಸಿದರೆ ಒಳ್ಳೆಯದು. ಪೋಷಕಾಂಶಗಳನ್ನು ಮರುಪೂರಣಗೊಳಿಸಲು ವರ್ಷಕ್ಕೊಮ್ಮೆ ರಿಪಾಟಿಂಗ್ ಮಾಡುವುದು ಒಳಿತು.

## ಕೀಟ-ರೋಗ ಬಾಧೆ

ನಮ್ಮಂತೆಯೇ ಗಿಡಗಳಿಗೂ ವೈರಸ್, ಫಂಗಸ್, ಹೇನು–ತಿಗಣೆಗಳ ಕಾಟವಿದೆ. ಹೆಚ್ಚು ನೀರು ನಿಲ್ಲುವ ಹಸಿ ಮಣ್ಣಿನಲ್ಲಿ ಬೇರು ಕೊಳೆಯುವ ರೋಗ ಸಾಮಾನ್ಯ. ಈ ರೋಗಕಾರಕ ಶಿಲೀಂಧ್ರಗಳ ವಾಸಸ್ಥಾನ ಮಣ್ಣು. ಸಸ್ಯಗಳ ಬುಡಕ್ಕೆ ಅಥವಾ ಬೇರುಗಳಿಗೆ ಆದ ಗಾಯದ ಮೂಲಕ ಒಳ ಸೇರಿ ರೋಗವನ್ನು ಉಂಟುಮಾಡುತ್ತವೆ. ಹಾಗಾಗಿ ವರ್ಷಕ್ಕೊಮ್ಮೆ ರಿಪಾಟಿಂಗ್ ನಂತರ ಶಿಲೀಂಧ್ರ ನಾಶಕದ (ಉದಾ: ಡೈಥೇನ್ M45 ಅಥವಾ ಕಾರ್ಬಂಡೇಜಿಯಮ್) ದ್ರಾವಣವನ್ನು ಉಣಿಸಬಹುದು. ಕೆಲವೊಮ್ಮೆ ಎಲೆ ಚುಕ್ಕೆಯಂಥ ಶಿಲೀಂಧ್ರ ರೋಗವು ಕಾಡಬಹುದು. ಇದಕ್ಕೂ ಸಲಹೆ–ಸೂಚನೆ ಮೇರೆಗೆ ಶಿಲೀಂಧ್ರ ನಾಶಕ ಸಿಂಪಡಿಸಬಹುದು. ಬೆಕ್ಕು, ನಾಯಿಯಂಥ ಸಾಕು ಪ್ರಾಣಿ, ಚಿಕ್ಕ ಮಕ್ಕಳಿರುವಲ್ಲಿ ಇಂತಹ ರಾಸಾಯನಿಕಗಳನ್ನು ಬಳಸುವಲ್ಲಿ ಜಾಗ್ರತೆ.



ಕಪ್ಪು ಬಣ್ಣದ ಎಫಿಡ್ಸ್, ಬಿಳಿಯ ಹತ್ತಿ ಚೂರಂತೆ ಕಾಣುವ ಮಿಲಿಬಗ್, ಎಲೆ ಮುಟ್ಟಿದರೆ ಹಾರುವ ಬಿಳಿಯ ವೈಟ್ ಫ್ಲೈಸ್, ಎಲೆಗಳಿಗೆ ಕಜ್ಜಿಯಂತೆ ಅಂಟಿಕೊಂಡಿರುವ ಸ್ಕೇಲ್ಸ್, ಎಲೆಯ ಅಡಿಯಲ್ಲಿ ಮರೆಯಾಗಿ ಕೂರುವ ಥ್ರಿಪ್ಸ್ ಮುಂತಾದ ಕೀಟಗಳು ಸಸ್ಯಗಳನ್ನು ಬಾಧಿಸಬಹುದು. ಸಸ್ಯದ ಎಲೆ, ಕಾಂಡದ ರಸ ಹೀರುವ ಜೀವ ಹಿಂಡುವ ಈ ಚಿಕ್ಕ ಕೀಟಗಳು ಕೆಲವೇ ದಿನದಲ್ಲಿ ನೋಡ ನೋಡುತ್ತಾ ಗಿಡಗಳನ್ನು ಸಾಯಿಸುತ್ತವೆ; ಕರಿಯ ಮಸಿ ಬಳಿದಂಥ ಎಲೆಗಳನ್ನು ಕಾಂಡಗಳನ್ನು ಉಂಟು ಮಾಡುತ್ತವೆ. ಇವುಗಳನ್ನು ಕಂಡಲ್ಲಿ ಕಿತ್ತು ಹೊಸಕಿ ಹಾಕುವುದು ಉತ್ತಮ ಉಪಾಯ. ಸೋಪ್ ನೀರನ್ನು ಸಿಂಪಡಿಸಬಹುದು. ನಿಯಂತ್ರಣವಾಗದಲ್ಲಿ ಬೇವಿನ ಎಣ್ಣೆಯ ಬಳಕೆ ಸೂಕ್ತ.

## ನೋಟ-ಮಾಟ

ಮನೆಯ ಒಳಾಂಗಣ ವಿನ್ಯಾಸಕ್ಕೆ ತಕ್ಕಂತೆ ಸಸ್ಯಗಳ, ಕಂಟೇನರ್‌ಗಳ ಆಯ್ಕೆ ನಮ್ಮ ಸೃಜನಶೀಲತೆ, ಜಾಣ್ಮೆಗೆ ಬಿಟ್ಟಿದ್ದು. ಸರಳವಾಗಿ ಕಿಟಕಿಯಂಚಿಗೆ, ಪಾಟ್‌ನಲ್ಲಿ ಚಿಕ್ಕದಾದ ಒಂದೇ ಸಕ್ಯುಲೆಂಟ್ಸ್ ಗಿಡವನ್ನು; ಮೇಜಿನ ಮೇಲೆ ಒಂದೇ ಒಂದು ಸುಂದರ ಬೋನ್ಸಾಯ್ ಇಡಬಹುದು. ಅಥವಾ ಶೋಕೇಸ್ ರ್‍ಯಾಕ್ ಪೂರ್ತಿ ಗಿಡಗಳನ್ನು ತುಂಬಿಸಬಹುದು. ಸಸ್ಯಗಳೂ ಮನುಷ್ಯರಂತೆ ಸಂಘಜೀವಿಗಳು. ಏಕಾಂಗಿಯಾಗಿ ಇರುವುದಕ್ಕಿಂತಲೂ ಗುಂಪು ಗುಂಪಾಗಿದ್ದರೆ ಅವುಗಳ ಖುಷಿಯೇ ಬೇರೆ. ಥರ ಥರದ ಪ್ಲಾಂಟ್ ಸ್ಟಾಂಡ್, ಪಾಟ್, ಹ್ಯಾಂಗರ್‌ಗಳಂತೂ ಮಾರುಕಟ್ಟೆಯಲ್ಲಿ ಬೇಕಾದಷ್ಟಿವೆ. ಫಿಲೊಡೆಂಡ್ರಾನ್‌ನಂತಹ ಗಿಡಗಳಿಗೆ ಆಧಾರವಾಗಿ ಮೋಸ್ ಪೋಲ್‌ಗಳನ್ನು ಬಳಸಬಹುದು.

ವಿವಿಧ ಗಾತ್ರದ, ಆಕಾರದ ಸಸ್ಯಗಳನ್ನು ಬೆಸ ಸಂಖ್ಯೆಯಲ್ಲಿ ಬೇರೆ ಬೇರೆ ಪಾಟ್‌ಗಳಲ್ಲಿ ರ್‍ಯಾಂಡಮ್ ಆಗಿ ಜೋಡಿಸಬಹುದು. ಖಾಲಿ ಬಿಳಿ ಗೋಡೆಯ ಮುಂದೆ 'ಸ್ಟೇಟ್‌ಮೆಂಟ್ ಪ್ಲಾಂಟ್' ಆಗಿ ಬೃಹತ್ ಹೆಲಿಕೋನಿಯಾ; ಪುಸ್ತಕದ ಕಪಾಟಿನಲ್ಲಿ ಬಳುಕುವ ಬಳ್ಳಿಯ ಪೋಥೋಸ್, ಫಿಲೊಡೆಂಡ್ರಾನ್, ಸ್ಟ್ರಿಂಗ್ ಆಫ್ ಹಾರ್ಟ್; ಟೀವಿಯ ಪಕ್ಕ ಬೃಹತ್ ಫಿಡಲ್ ಫಿಗ್; ಹಸಿರು ವನಕ್ಕೆ ರಂಗು ಬಳಿಯಲು ಬಣ್ಣದ ಎಲೆಯ ಕೆಲಾಥಿಯಾ, ಕೆಲಾಡಿಯಮ್; ಕೊಕೆಡಾಮಾ, ಟೆರೆರಿಯಮ್‌ಗಳನ್ನು ಪ್ರದರ್ಶಿಸಬಹುದು. ಪಾಟ್‌ನ ಕಂಠವನ್ನು ಬಿಳಿ ಅಥವಾ ಬಣ್ಣ ಬಣ್ಣದ ಕಲ್ಲಿನಿಂದ ಅಲಂಕರಿಸಬಹುದು.

## ಅಲ್ಲಿರುವುದು ನಮ್ಮನೆ...

ರಜೆ ಬಂದರೆ ಹಳ್ಳಿಯ ಕಡೆ ಮುಖ ಮಾಡುವ ಬಹಳಷ್ಟು ಪಟ್ಟಣಿಗರಿದ್ದಾರೆ. ಊರಿಗೆ ಹೊರಟರೆ ಅವರಿಗೆ ಗಿಡದ್ದೇ ಚಿಂತೆ. ಎಷ್ಟೋ ಜನ ಇದೇ ಸಲುವಾಗಿ ಆಸಕ್ತಿಯಿದ್ದರೂ ಗಿಡ ಬೆಳೆಸುವ ಗೋಜಿಗೆ ಹೋಗುವುದಿಲ್ಲ. ಈ ಸಮಸ್ಯೆಗೆ ಇಂದಿನ ಜಮಾನಾದಲ್ಲಿ ಕೆಲವು ಪರಿಹಾರಗಳಿವೆ. ಅಂಥ ಕೆಲವು ಆಯ್ಕೆ–ಮುನ್ನೆಚ್ಚರಿಕೆಗಳು ಹೀಗಿವೆ: